ಸಲಹೆಗಳನ್ನು ಕೊಡಬಲ್ಲರು. ಇದನ್ನು ಪರ್ಯಾಲೋಚಿಸಿ ತಮಗಿರುವ ಅನುಕಂಪವನ್ನು ಅನುಷ್ಠಾನಕ್ಕೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

SRI BLALIUS D SOUZA.—Sir, the Hon'ble Chief Minister in his Budget Speech has stated that he will rationalise the sales tax and see that no diversion of trade to other Statrs take place. Now he has increased the entry tax which may result in diversion of trade particularly textile industry to the other neighbouring States where the tax rate is less.

SRI RAMAKRISHNA HEGDE.—Sir, there is no such possibility of diversion of trade in the textile industry because textile is an essential commodity. There is a gereral impression that entry tax has multi-point effect and many traders who met me also gave me this kind of impression, but it does not have the multi point effect. Regarding aboilition of octroi, it was done with a view to remove the difficulties, harassment and corruption involved in connection with the octroil and we have imposed entry tax in lieu of octori and therefore we cannot remove it.

ಶಾಸನ ಕಾರ್ಯಕಲಾಪಗಳು

೧೯೫೫ನೇ ಇಸವಿಯ ರಾಜ್ಯದ ಬಳಕೆ ಉಪಯೋಗ ಹಾಗೂ ಮಾರಾಟಕ್ಕಾಗಿ ಸ್ಥಳೀಯ ಪ್ರದೇಶದೊಳಗೆ ಬರುವ ಸರಕುಗಳ ಮೇಸ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, (ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ) ೧೯೫೫ನೇ ಇಸವಿಯ ರಾಜ್ಯದ ಬಳಕೆ, ಉಪಯೋಗ ಹಾಗೂ ಮಾರಾಟಕ್ಕಾಗಿ ಸ್ಥಳೀಯ ಪ್ರದೇಶದೊಳಗೆ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನೆಯನ್ನು ಪುರಸ್ಕರಿಸಲಾಯಿತು

ಶ್ರೀ ಎ ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಈ ವಿಧೇಯಕದ ಮೇಲೆ ಸದಸ್ಯರು ವಿಪುಲವಾದ ಚರ್ಚೆಯನ್ನು ಮಾಡಿದ್ದಾರೆ. ತಮ್ಮ ಟೀಕೆಟಿಪ್ಪಣಿಗಳನ್ನು ತಿಳಿಸಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ ಎಂಟ್ರಿ ಟ್ಯಾಕ್ಸ್ ೧ ರೂಪಾಯಿ ಇದ್ದುದನ್ನು ೨ ರೂಪಾಯಿ ಮಾಡಿದ್ದಾರೆ ಹೇಗೆ ? ನಮ್ಮ ರಾಜ್ಯದಲ್ಲಿ ಕಡಿವೆಂ ವ್ಯಾಪಾರ ಆಗುತ್ತದೆ ಎಂದು ಚೇಂಬರ್ಸ್ ಆಫ್ ಕಾಮರ್ಸ್‌ನವರು ರೆಪ್ರಸೆಂಟೇಶನ್ಸ್ ಮಾಡಿದ್ದಾರೆ. ದಯವಿಟ್ಟು ಈಗಲಾದರೂ ಇದನ್ನು ಕಡಿವೆ ಮಾಡಬೇಕೆಂದು ಹೇಳುತ್ತಾ ನಾನು ಈ ಮಸೂದೆಯನ್ನು ವಿರೋಧಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸಭಾಧ್ಯಕ್ಷರೆ, ಈ ತಿದ್ದುಪಡಿ ವಿಧೇಯಕದ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಪೇಳಿದಹಾಗೆ ಏನೂ ಬದಲಾವಣೆಯಾಗುವುದಿಲ್ಲವೆಂದು ಅವರೇ ತಿಳಿಸಿದ್ದಾರೆ. ಸಾಕಷ್ಟು ಇದರ ಬಗ್ಗೆ ಚರ್ಚೆಯಾಗಿದೆ ಈ ತಿದ್ದುಪಡಿ ಮಸೂದೆಯನ್ನು ಪಾಸ್ ಮಾಡಿಕೊಡಬೇಕೆಂದು ಸನ್ಮಾನ್ಯ ಸದಸ್ಯರುಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ.—ರಿಕ್ಷೇನೇ ಇಸವಿಯ ರಾಜ್ಯದ ಬಳಕೆ, ಉಪಯೋಗ ಹಾಗೂ ಮಾರಾಟಕ್ಕಾಗಿ ಸ್ಥಳೀಯ ಪ್ರದೇಶದೊಳಿಗೆ ಬರುವ ಸರಕಂಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

೨ನೇ ಖಂಡ

ಅಧ್ಯಕ್ಷರು,—೨ನೇ ಖಂಡಕ್ಕೆ ಮಾನ್ಯ ಮಂತ್ರಿಗಳು ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ತಿದ್ದುಪಡಿಯನ್ನು ಮಂಡಿಸಬೇಕು.

SRI A LAKSHMISAGAR --(Minister for Urban Development and Law and Parliamentary Affairs);

Sir, I beg to move that;

After sub-clause (3), the following shall be inserted :

''(4) in clause (5), the word" and the area comprised within a distance of five kilometers from the limits of such local areas ''shall be and shall be deemed always to have been omitted''.

MR. SPEAKER.—The question is :-

''After sub-clause 3), the following shall be inserted :

"(4) in clause (5), the words ''and the area comprised within a distance of five kilometers from the limits of such local areas'' shall be deemed always to have been omitted.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(೨ನೇ ಖಂಡವು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ ೩ ರಿಂದ ೧೧ ರವರೆಗೆ

ಅಧ್ಯಕ್ಷರು —''೩ರಿಂದ ೧೧ನೇ ಖಂಡಗಳು ವಿಧೇಯಕದ ಲಂಗವಾಗಿರುತ್ತವೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(೩ ರಿಂದ ೧೧ರವರೆಗಿನ ಖಂಡಗಳು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ --

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ

''ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ

ಪ್ರಸ್ತಾವವನ್ನು ಅಂಗೀಕರಿಸಲಾಯಿತು

ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮವಂಗೂಳಿಸುವ ಸೂತ. ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಡಳಿತ, ಕಾನೂನು ಮತ್ತು ಸಂಸದೀಯ ಸಚಿವರು).—

''೧೯೪೫ನೇ ಇಸವಿಯ ತಿದ್ದುಪಡಿಯಾದಂತಹ ರಾಜ್ಯದ ಬಳಕೆ ಉಪಯೋಗ ಹಾಗೂ ಮಾರಾಟಕ್ಕಾಗಿ ಸ್ಥಳೀಯ ಪ್ರದೇಶದೊಳಗೆ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ :

''೧೯೪೫ನೇ ಇಸವಿಯ ತಿದ್ದುಪಡಿಯಾದಂತಹ ರಾಜ್ಯದ ಬಳಕೆ ಉಪಯೋಗ ಹಾಗೂ ಮಾರಾಟಕ್ಕಾಗಿ ಸ್ಥಳೀಯ ಪ್ರದೇಶದೊಳಗೆ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಸೂದೆಗೆ ಒಪ್ಪಗೆ ನೀಡಲಾಯಿತು.

೧೯೪೫ನೇ ಇಸವಿಯ ಕರ್ನಾಟಕ ವೃತ್ತಿ, ವ್ಯಾಪಾರ, ಕಸಬು ಹಾಗೂ ಉದ್ಯೋಗಗಳ ಮೇಲಿನ ತೆರಿಗೆಗೆ ಸಂಬಂಧಿಸಿದ (ತಿದ್ದುಪಡಿ) ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ನಗರಾಭಿವೃದ್ಧಿ ಸಚಿವರು).—೧೯೪೫ನೇ ಇಸವಿಯ ಕರ್ನಾಟಕ ವೃತ್ತಿ, ವ್ಯಾಪಾರ, ಕಸುಬು ಹಾಗೂ ಉದ್ಯೋಗಗಳ ಮೇಲಿನ ತೆರಿಗೆಗೆ ಸಂಬಂಧಿಸಿದ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ವಂಡಿಸಲಾಯಿತು

† ಶ್ರೀ ಎಂ.ಎಸ್ ಕೃಷ್ಣನ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೆ ವೃತ್ತಿ ತೆರಿಗೆಯ ಬಗ್ಗೆ ಇಲ್ಲಿ ಮಂಡಿಸಿರತಕ್ಕಂತಹ ಮಸೂದೆಯ ಪ್ರಕಾರ ಕನಿಷ್ಟ ಸಂಬಳ ೧೨೦೦ ಕಡಿಮೆ ಇದ್ದರೆ, ಅಂತಹವರಿಗೆ ಇವತ್ತಿನ ದಿವಸ ಅವರ ಮೂಲ ಸಂಬಳದ ಆಧಾರದ ಮೇಲೆ ವಿನಾಯಿತಿಯನ್ನು ಕೊಡಬೇಕು ಎಂಬ ಅಂಶ ಇದರಲ್ಲಿ ಅಡಕವಾಗಿದೆ. ಆ ಒಂದು ವಿಷಯವನ್ನು ನಾನಂ ಸ್ವಾಗತಿಸುತ್ತೇನೆ. ಏಕೆಂದರೆ ಅದು ಮೊದಲು ಇದ್ದ ರೀತಿಯಲ್ಲಿ ಸಂಬಳ ಅಂದರೆ ಒಟ್ಟು ಗ್ರಾಸ್ ಸ್ಯಾಲರಿ ಅಂತ ಹೇಳುತ್ತಿದ್ದರು. ಒಟ್ಟು ಸಂಬಳವನ್ನು ತೆಗೆಪುಕೊಂಡಾಗ ಖಂಡಿತವಾಗಿಯೂ ಅನೇಕರಿಗೆ ಬಹಳ ತೊಂದರೆಯಾಗುತ್ತಿತ್ತು. ಈಗ ತಂದಿರುವ ತಿದ್ದುಪಡಿಯ ರೀತಿಯಲ್ಲ್ಲೇ ಕಳೆದ ಸಾರಿ ಒಂದು ತಿದ್ದುಪಡಿಯನ್ನು ತಂದರು. ಆ ತಿದ್ದುಪಡಿಯ ವಿರುದ್ಧವಾಗಿ ನೋಟಿಫಿಕೇಷನ್ ಹೊರಡಿಸಿದರು. ಅದರ ಆಧಾರದ ಮೇಲೆ ಈ ಒಂದು ವೃತ್ತಿ ತೆರಿಗೆಯನ್ನು ವಸೂಲಿ ಮಾಡಿದ್ದರು. ಬಹಳ ಜನ ಕಾರ್ಮಿಕರು ಇದ್ದಾರೆ. ಮಧ್ಯಮ ವರ್ಗದ ನೌಕರರೂ ಇದ್ದಾರೆ. ಅಂತಹವರಿಗೆಲ್ಲಾ ಅದರಿಂದ ತುಂಬಾ ತೊಂದರೆಯಾಯಿತು. ಪ್ರತಿ ತಿಂಗಳಿಗೆ ೨೦ ರೂ.ಗಳಿಂದ ೨೫ ರೂ.ಗಳವರೆಗೆ ಸರ್ಕಾರಿ ನೌಕರರಿಗೆ ೨೫ ರಿಂದ ೩೦ ರೂಪಾಯಿಗಳವರೆಗೆ ಹೀಗೆಲ್ಲಾ ಅವರ ಸಂಬಳದಲ್ಲಿ ಕಟ್ ಮಾಡಿದರು. ಈಗ ಈ ಒಂದು ತಿದುಪಡಿಯಿಂದ ಅದು ಹೋಗಿ ಒಂದು ವಿಭಾಗದ ಜನರಿಗೆ ಸ್ವಲ್ಪ ಮಟ್ಟಿನ ರಿಯಾಯಿತಿ

† ಈ ಚಿನ್ಹೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.